**ದಿನಾಂಕಃ 20.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ ವಾದಿ ಪರ Sri DKM ವಕೀಲರಿಂದಃ**

ನಾನು ಹಾಸನದಲ್ಲಿ 30 ವರ್ಷದಿಂದ ವಾಸವಾಗಿದ್ದೇವೆ. ಈ ಕೇಸನ್ನು ಗೀತ ಎನ್ನುವವರು ಮಧುಸೂದನ ರವರ ವಿರುದ್ಧ ಹಾಕಿದ್ದಾರೆ ಗೀತ ಎನ್ನುವವರು ಪರಿಚಯ ಇರುವುದಿಲ್ಲ ಆದರೆ ಒಮ್ಮೆ ಬೇಟಿ ಮಾಡಿದ್ದೇನೆ. ಗೀತಾ ರವರ ವಿಳಾಸ ನನಗೆ ಗೊತ್ತಿಲ್ಲ. ಈ ಕೇಸು ಜಮೀನಿನ ಬಗ್ಗೆ ಅರುವನಹಳ್ಳಿ ಜಮೀನಿನ ಬಗ್ಗೆ ಹಾಕಲಾಗಿದೆ. ವಾದಿ ಮತ್ತು ಪ್ರತಿವಾದಿ ನಡುವೆ ವ್ಯವಹಾರ ಏನು ಆಗಿದೆ ಎಂದರೆ ಕರಾರುಪತ್ರವನ್ನು ರದ್ದು ಪಡಿಸಿ ಜಮೀನನ್ನು ಬರೆದುಕೊಡುವುದು. ಸದರಿ ವ್ಯವಹಾರ ನನ್ನ ಸಮಕ್ಷಮ ಆಗಿರುವುದಿಲ್ಲ. ಸದರಿ ವ್ಯವಹಾರದ ಬಗ್ಗೆ ನೋಂದಣಿ ಆಗುವ ಸಮಯದಲ್ಲ ನಾನು ಅಲ್ಲಿಗೆ ಬಂದಿದ್ದೇನೆ. 1ನೇ ಪ್ರತಿವಾದಿ ನನ್ನಸ್ನೇಹಿತ 20 ವರ್ಷದಿಂದ ಸ್ನೇಹಿತರಾಗಿದ್ದೇವೆ . ಯಾವ ದಿನಾಂಕಂದು ನೋಂದಣಿ ಕಛೇರಿಗೆ ಬಂದಿರುತ್ತೇನೆ ಎಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಾಗುವುದಿಲ್ಲ. ನೋಂದಣಿ ಆಗುವಾಗ ಒಂದೇ ದಿನ ಬಂದಿರುತ್ತೇನೆ. ನಾನು ಚನ್ನರಾಯಪಟ್ಟಣದಲ್ಲಿ ವ್ಯವಹಾರ ಮಾಡುತ್ತಿದ್ದು ಅದು ಕಲೆಕ್ಷನ್ ಗೋಸ್ಕರ ಬಂದಿರುತ್ತೇನೆ . ವಾದಿ ಪ್ರತಿವಾದಿಯರು ವ್ಯವಹಾರ ಮಾಡಿಕೊಂಡ 1ನೇ ಪ್ರತಿವಾದಿ ನನ್ನ ಬಳಿ ಹೇಳಿರುತ್ತಾರೆ. ನೇರವಾಗಿ 1ನೇ ಪ್ರತಿವಾದಿ ನನ್ನ ಬಳಿ ಹೇಳಿರುತ್ತಾರೆ . ಮೊದಲು ಒಂದು ನೋಂದಾಯಿತ ಕರಾರುಪತ್ರ 10.12.2012 ರಂದು ಮಾಡಿಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಜಮೀನಿನ ವ್ಯವಹಾರದ ಬಗ್ಗೆ ಮಾತುಕತೆಯಲ್ಲಿ ನಾನು ಹಾಜರಾಗಿರುವುದಿಲ್ಲ. ಜಮೀನಿನ ವ್ಯವಹಾರದ ಬಗ್ಗೆ ನೋಂದಣಿ ಆದ ವಿಚಾರ ಆ ದಿನ ನನಗೆ ತಿಳಿದು ಬಂದಿರುತ್ತದೆ ಎಷ್ಟು ಹಣಕ್ಕೆ ವ್ಯವಹಾರ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಜಮೀನು ಮಾರಾಟ ಮಾಡಿದ ನಂತರ ವಾದಿಯ ಹೆಸರಿನಲ್ಲಿ ಕ್ರಯಪತ್ರ ಆಗಿ ಅವರೆ ಸ್ವಾಧಿನದಲ್ಲಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಇದೇ ಆಸ್ತಿ ಸಂಬಂಧವಾಗಿಯೋಗೀಶ ಎನ್ನವವರಿಗೆ ನೋಂದಾಯಿತ ಕ್ರಯ ಕರಾರುಪತ್ರ

ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಕ್ರಯಪತ್ರಕ್ಕೆ ಯಾರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದು ಹಾಗೂ ಆ ಪತ್ರಕ್ಕೆ ಬಿಕಲಂದಾರರು ಯಾರು ಎಂದು ನನಗೆ ಗೊತ್ತಿಲ್ಲ. ನಾನು ನೋಂದಾಣಾಧಿಕಾರಿ ಕಛೇರಿ ಒಳಗೆ ಹೋಗಿರುವುದಿಲ್ಲ. ವಾದಿಯು ಆಸ್ತಿಯನ್ನು ಬೇರೆಯವರಿಗೆ ಮಾರಾಟ ಮಾಡಲು ಪ್ರಯತ್ನ ಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಒಪ್ಪಿಗೆ ಆಗುವ ಬೆಲೆಗೆ ಯಾರು ಮುಂದೆ ಬರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಂತರ ಪ್ರತಿವಾದಿ 1 ರವರು ನೀವೇ ತೆಗೆದುಕೊಳ್ಳಿ ಎಂದು ವಾದಿಯ ಜೊತ ವ್ಯವಹಾರ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 750000 ರೂ ಗಳಿಗೆ ವಾದಿ ಮತ್ತು ಪ್ರತಿವಾದಿಯರು ಮಾರಾಟದ ಬೆಲೆಯೆಂದು ನಿಷ್ಕರ್ಷೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನೂಂದಣಿ ಕಛೇರಿಗೆ ನಾನು ಬಂದ ದಿನ ಹೊರತುಪಡಿಸಿ ಬೇರೆ ಯಾವುದೇ ವಿಚಾರ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ 20.03.2015 ರಂದು ಕ್ರಯಕರಾರುಪತ್ರ ಮಾಡಿಕೊಂಡು ಮುಂಗಡ ಹಣ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ವಾದಿಗೆ ಕ್ರಯಪತ್ರ ಮಾಡಿಕೊಡಲು ಸಮಯವನ್ನು ಕೋರುತ್ತಾ ಕಾಲಾಹರಣ ಮಾಡುತ್ತಾ ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಇವರ ಸ್ವಭಾವದಿಂದ ಬೇಸತ್ತು ವಾದಿಯು ವಕೀಲರ ಮುಖೇನ ತಿಳುವಳಿಕೆ ಪತ್ರ ಕೊಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯು ಕ್ರಯಪತ್ರ ಮಾಡಿ ಕೊಡದೆ ಇದ್ದ ಕಾರಣ ವಾದಿಯು ಕೇಸನ್ನು ಹಾಕಿರುತ್ತಾರೆ ಎಂದರೆ ಸರಿ. ನನಗೆ 1ನೇ ಪ್ರತಿವಾದಿ ಸ್ನೇಹಿತ ಅಷ್ಟೆ ಅವರು ಏನೇನು ವ್ಯವಹಾರ ಮಾಡಿರುತ್ತಾರೆ ಎಂದು ನನಗೆ ನಿರ್ದಿಷ್ಟ ಮಾಹಿತಿ ಇಲ್ಲ ಎಂದರೆ ಸರಿ .

ಪಾಟೀ ಸವಾಲಿಗೆ ಕಾಲಾವಾಕಾಶ ಕೋರಿದ್ದು, ಕಾಲಾವಾಕಾಶ ನೀಡಲಾಯಿತು.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಚನ್ನರಾಯಪಟ್ಟಣ